# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ದಿನಾಂಕ:26-11-2021

## ವಾರ್ಡ್-85ರ ವಾರ್ಡ್ ಸಮಿತಿ ಸಭೆ

## *ಸಭೆಯ ನಡವಳಿಗಳು*

**ವಿಷಯ:-** ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ:21-09-2020 ರವರ ಆದೇಶದಂತೆ ದಿನಾಂಕ:26-11-2021 ರಂದು ವಾರ್ಡ್ ನಂ.85 ರ ಎ.ಇ.ಸಿ.ಎಸ್ ಬಡಾವಣೆ, ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಸಭೆಗೆ ಹಾಜರಾಗಿದ್ದವರ ವಿವರಗಳು:**

| ಕ್ರ ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಪ್ರಕಾಶ್ | ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು |
| 2 | ಶ್ರೀ.ರಾಚಪ | ಕಾರ್ಯದರ್ಶಿ |
| 3 | ಶ್ರೀ.ದೇವರಾಜ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ.ಮಂಜುನಾಥ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 5 | ಸಹಾಯಕ ಅಭಿಯಂತರರು | BWSSB |
| 6 | ಶ್ರೀ.ಆಕಾಶ್ | ರಸ್ತೆ ಮೂಲಭೂತ ಸೌಕರ್ಯ |
| 7 | ಶ್ರೀ.ಜಗದೀಶ್ | ಬೀದಿ ದೀಪಗಳು |
| 8 | ಶ್ರೀ.ರಾಜಶೇಖರ್ ರೆಡ್ಡಿ | ಮುಖ್ಯಸ್ಥರು, ಕುಂದಲಹಳ್ಳಿ |
| 9 | ಶ್ರೀ.ವೆಂಕಟೇಶ್ | ಎ.ಇ.ಸಿ.ಎಸ್ ಲೇಔಟ್ ಅಸೋಶಿಯೇಷನ್ ಅಧ್ಯಕ್ಷರು |
| 10 | ಶ್ರೀ.ವೆಂಕಟೇಶ್.ಹೆಚ್ | ಎ.ಇ.ಸಿ.ಎಸ್ ಲೇಔಟ್ ಅಸೋಶಿಯೇಷನ್ ಕಾರ್ಯದರ್ಶಿ |
| 11 | ಶ್ರೀ.ಈಶ್ವರ್ | ಎ.ಇ.ಸಿ.ಎಸ್ ಲೇಔಟ್ |
| 12 | ಶ್ರೀ.ರಮೇಶ್ | ವಾಸ ಲೇಔಟ್ |
| 13 | ಶ್ರೀ.ಸುಂದರ್‌ರಾಜ್ | ಎ.ಇ.ಸಿ.ಎಸ್ ಲೇಔಟ್ |
| 14 | ಪೋಲಿಸ್ ಸಿಬ್ಬಂದಿ | ಹೆಚ್.ಎ.ಎಲ್ |
| 15 | ಶ್ರೀ.ನಂದೀಶ್ | ತೂಬರಹಳ್ಳಿ |
| 16 | | |

ಶ್ರೀ.ಪ್ರಕಾಶ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ಸಭೆಯಲ್ಲಿ ಹಾಜರಿದ್ದ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿರವರುಗಳಿಗೆ ಹಾಗೂ ಸಂಘಸಂಸ್ಥೆಯ ಮುಖ್ಯಸ್ಥರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಸಭೆಯಲ್ಲಿ ವೆಂಕಟೇಶ್ ಎ.ಇ.ಸಿ.ಎಸ್. ಬಡಾವಣೆಯ ಅಧ್ಯಕ್ಷ ರವರು ಎ.ಇ.ಸಿ.ಎಸ್ ಲೇಔಟ್‌ನಲ್ಲಿ ಸ್ವಚ್ಚತಾ ಕೆಲಸಗಳನ್ನು ಕ್ರಮವಾಗಿ ಸಮರ್ಪಕವಾಗಿ ಕೆಲಸ ನಿರ್ವಹಿಸಲು ಮತ್ತು ಬ್ಲಾಕ್‌ವೈಸ್ ಕೆಲಸ ಮಾಡಲು ಹಾಗೂ ಬಿದ್ದಿರುವ ಕಸವನ್ನು ಕ್ರಮವಾಗಿ ತೆರವುಗೊಳಿಸಲು ಕಿರಿಯ ಆರೋಗ್ಯ ನೀರಿಕ್ಷಕರಿಗೆ ಸೂಚಿಸಲಾಯಿತು.

2. ಎ.ಇ.ಸಿ.ಎಸ್. ಬಡಾವಣೆಯ ಕ್ಷೇಮಾಭಿವೃದ್ದಿ ಸಂಘ ವೆಂಕಟೇಶ್ ರವರು Power fluxations and Power Problems ಸರಿಪಡಿಸುವುದಾಗಿ ಬೆಸ್ಕಾಂ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.

3. ಸಭೆಯಲ್ಲಿ ಹೆಚ್.ಎ.ಎಲ್ ಪೋಲೀಸ್ ಠಾಣೆ ASI ರವರು ಮಾತನಾಡಿ ರಾತ್ರಿ ಗಸ್ತು ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ಎ.ಇ.ಸಿ.ಎಸ್. ಬಡಾವಣೆಯ ಕ್ಷೇಮಾಭಿವೃದ್ದಿ ಸಂಘ ವೆಂಕಟೇಶ್, ಕಾರ್ಯದರ್ಶಿ ರವರು ಮಾತನಾಡಿ ಲೇಔಟ್‌ನಲ್ಲಿ ಕಾನೂನು ಸುವ್ಯವಸ್ಥೆ ಸರಿಯಾಗಿಲ್ಲ ಕಾರಣ ಕ್ರಮವಾಗಿ ಹೆಚ್ಚಾಗಿ ತನಿಖೆ ಮಾಡಿಸಲು ತಿಳಿಸಿರುತ್ತಾರೆ.

4. ಸ್ಪೈಸ್ ಗಾರ್ಡ್‌ನ್ ಹತ್ತಿರ Under Pass ನೀರು ನಿಲ್ಲುವ ಕಾರಣ ರಸ್ತೆ ಮೂಲಭೂತ ಸೌಕರ್ಯ ರವರಿಗೆ ಕ್ರಮವಹಿಸಲು ಸಭೆಯಲ್ಲಿ ಸೂಚಿಸಲಾಯಿತು.

5. ಎ.ಇ.ಸಿ.ಎಸ್. ಬಡಾವಣೆಯ ವಾರ್ಡ್ ಕಛೇರಿಯ ಪಕ್ಕದಲ್ಲಿರುವ ಬಸ್ ನಿಲ್ದಾಣದ ಶೆಡ್‌ನ್ನು ಸಿ.ಎಂ.ಟಿ.ಆರ್ ಕಾಲೇಜ್ ಮುಂಭಾಗ, ಐ.ಟಿ.ಪಿ.ಎಲ್ ಮುಖ್ಯ ರಸ್ತೆ ಇಲ್ಲಿ ಸ್ಥಳಾಂತರಿಸಲು ರಸ್ತೆ ಮೂಲಭೂತ ಸೌಕರ್ಯ ರವರಿಗೆ ಸೂಚಿಸಲಾಯಿತು.

6. ಆಶ್ರಯ ಬಡಾವಣೆಯ 1ನೇ ಹಂತ ಮತ್ತು 2ನೇ ಹಂತ ಎಲ್ಲಾ ಕ್ರಾಸ್ ರಸ್ತೆಗಳಿಗೆ ಡಾಂಬರೀಕರಣ ಮಾಡಿಸಲು ಕ್ರಮ ಕೈಗೊಳ್ಳಬೇಕೆಂದು ಶ್ರೀ.ರಮೇಶ್ ರವರು ಕೋರಿರುತ್ತಾರೆ.

7. ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹ ಆಟೋಟಿಪ್ಪರುಗಳು ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಮತ್ತು ಪ್ರತಿ ಗಾಡಿಯಲ್ಲಿ ಸಹಾಯಕರು ಇರುವುದಿಲ್ಲ ಹಾಗೂ ಸಹಾಯಕ, ಡ್ರೈವರ್‌ಗಳಿಗೆ ಸಮವಸ್ತ್ರ ಇರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

8. ಘನತ್ಯಾಜ್ಯ ಸಂಗ್ರಹ ಆಟೋಟಿಪ್ಪರುಗಳಲ್ಲಿ ಧ್ವನಿವರ್ಧಕಗಳು ಇರುವುದಿಲ್ಲ. ಹಾಗೂ ಧ್ವನಿವರ್ಧಕಗಳು ಇರುವ ಗಾಡಿಗಳಲ್ಲಿ ಹಾಕುವುದಿಲ್ಲ. ಹಾಗೂ ಪೌರಕಾರ್ಮಿಕರು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ. ಬೆಳಿಗ್ಗೆ 11.00 ಘಂಟೆಯಾದರು ವಾರ್ಡ್‌ನಲ್ಲಿ ಬ್ಲಾಕ್ ಸ್ಪಾಟ್‌ಗಳನ್ನು ತೆಗೆದಿರುವಿದಿಲ್ಲವೆಂದು ಸಭೆಯ ಮುಖಾಂತರ ತಿಳಿಸುತ್ತಾ ಮೇಲ್ಕಂಡ ಘನತ್ಯಾಜ್ಯ ನ್ಯೂನತೆಗಳನ್ನು ಸರಿಪಡಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

9. ಎ.ಇ.ಸಿ.ಎಸ್. ಬಡಾವಣೆಯ 60 ಅಡಿ ರಸ್ತೆಯಲ್ಲಿ ನಡೆಯುತ್ತಿರುವ ರಸ್ತೆ ಅಗಲೀಕರಣ ಮತ್ತು ಪುಟ್‌ಪಾತ್ ಕೆಲಸವು ಸಮರ್ಪಕವಾಗಿ ನಡೆಯದೇ ಇರುವುದರಿಂದ ಸಂಬಂಧಪಟ್ಟ ರಸ್ತೆ ಮೂಲಭೂತ ಸೌಕರ್ಯ ಅಧಿಕಾರಿ ರವರು ಮುಂದಿನ ಸಭೆಗೆ ಹಾಜರಾಗಲು ಸೂಚಿಸಲಾಯಿತು.

10. ಎ.ಇ.ಸಿ.ಎಸ್. ಬಡಾವಣೆಯ 60 ಅಡಿ ರಸ್ತೆಯಲ್ಲಿ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ರಸ್ತೆ ಮೂಲಭೂತ ಸೌಕರ್ಯ ಅಧಿಕಾರಿ ರವರಿಗೆ ಸೂಚಿಸಿಲಾಯಿತು.

11. ಎ.ಇ.ಸಿ.ಎಸ್. ಬಡಾವಣೆಯ ಶ್ರೀ.ಈಶ್ವರ್ ರವರು ಮಾತನಾಡಿ ಬಡಾವಣೆಗೆ ಕಾವೇರಿ ನೀರು ಸರಬರಾಜು ಮಾಡಲು ಬ್ಲಾಕ್ ವೈಸ್ ವಿತರಣೆ ಮಾಡುವಂತೆ ಕೋರಿದ್ದು, ಸದರಿ ದಿನಾಂಕಗಳನ್ನು ನಿಗಧಿಪಡಿಸಲು ಕೋರಲಾಯಿತು.

12. ಕಂದಾಯ ಅಧಿಕಾರಿಗಳಿಗೆ ಆಸ್ತಿ ತೆರಿಗೆಯಲ್ಲಿರುವ ದೋಷ ಸರಿಪಡಿಸಲು ಹಾಗೂ ಕ್ಯಾಂಪ್ ಮಾಡಲು ಬಿಬಿಎಂಪಿ ಕಂದಾಯ ನೀರಿಕ್ಷಕರಿಗೆ ರವರಿಗೆ ತಿಳಿಸಲಾಯಿತು.

13. ಎ.ಇ.ಸಿ.ಎಸ್. ಬಡಾವಣೆಯಲ್ಲಿ 3 ಕಲ್ವರ್ಟ್ ನಿರ್ಮಾಣ ಮಾಡಲು ವಾರ್ಡ್ ಅಭಿಯಂತರರು ರವರಿಗೆ ಸಭೆಯ ಮುಖಾಂತರ ಕೋರಲಾಯಿತು.

ಸಭೆಯಲ್ಲಿ ಇತರ ಇಲಾಖೆಯವರಾದ ಮತ್ತು ತೋಟಗಾರಿಕೆ ಇಲಾಖೆ ರವರಿಗೆ ಮುಂದಿನ ಸಭೆಗೆ ಹಾಜರಾಗಲು ನೋಟೀಸ್ ಜಾರಿ ಮಾಡಲು ಶ್ರೀ.ಪ್ರಕಾಶ್, ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ಸೂಚಿಸಿದರು.

ಈ ಮೇಲ್ಕಂಡ ಅಂಶಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ
ವಾರ್ಡ್ ನಂ.85

ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಕಮಿಟಿ ಅಧ್ಯಕ್ಷರು
ವಾರ್ಡ್ ನಂ.85